I.T.I. ಕಾಲೇಜು ನಿರ್ಮಾಣ

176 : (124)

ಶ್ರೀ ರುದ್ರೇಶಗೌಡ.ವೈ.ಎನ್ (ಬೇಲೂರು)

ಅ) ಹಾಸನ ಜಿಲ್ಲೆಯ ಬೇಲೂರು ನಗರಕ್ಕೆ I.T.I ಕಾಲೇಜು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದಲ್ಲಿ, ಇಷ್ಟು ವರ್ಷವಾದರೂ ಸ್ವಂತ ಕಟ್ಟಡ ಮಂಜೂರಾಗದಿರಲು ಹಾಗೂ ಸ್ವಂತ ಕಟ್ಟಡಕ್ಕಾಗಿ ನಿವೇಶನ ಮಂಜೂರಾಗಿದ್ದರೂ, ಕಟ್ಟಡ ನಿರ್ಮಿಸದಿರಲು ಕಾರಣವೇನು?

Action will be taken for construction of building based on availability of funds.

ಶ್ರೀ ಬಿ.ಎನ್. ಬಚ್ಚೇಗೌಡ
(ಮಾನ್ಯ ಕಾರ್ಮಿಕ ಸಚಿವರು.)

ಅ) ಹೌದು,

ಆ) ಅನುದಾನ ಲಭ್ಯತೆಯನ್ನು ಆಧರಿಸಿ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಾಂಸ್ಕೃತಿಕ ಭವನ ನಿರ್ಮಾಣ

154 : (341)

ಶ್ರೀ ಮಾನಪ್ಪ ವಜ್ಜಲ್ (ಲಿಂಗಸುಗೂರು)

ಅ) ರಾಯಚೂರು ಜಿಲ್ಲೆಯಲ್ಲಿ ಎಷ್ಟು ಸಾಂಸ್ಕೃತಿಕ ಭವನಗಳನ್ನು ನಿರ್ಮಿಸಲಾಗಿದೆ; (ಮಾಹಿತಿ ನೀಡುವುದು)

ಆ) ಈ ಜಿಲ್ಲೆಯಲ್ಲಿ ಎಷ್ಟು ಸಾಂಸ್ಕೃತಿಕ ಭವನಗಳನ್ನು ನಿರ್ಮಾಣ ಮಾಡಲು ಸರ್ಕಾರವು ಉದ್ದೇಶಿಸಿದೆ;

ಇ) ಹಾಗಿದ್ದಲ್ಲಿ, ಲಿಂಗಸುಗೂರು ತಾಲ್ಲೂಕಿನ ಕೇಂದ್ರಭಾಗದಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಗೋವಿಂದ ಎಂ.ಕಾರಜೋಳ

(ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ರಾಯಚೂರು ಜಿಲ್ಲೆಯಲ್ಲಿ 17 ಸಾಂಸ್ಕೃತಿಕ ಭವನಗಳನ್ನು ಸರ್ಕಾರದ ಮಂಜೂರಾತಿ ನೀಡಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ.

ಆ) ಯಾವುದೇ ನಿರ್ದಿಷ್ಟ ಸಂಖ್ಯೆಯ ಸಾಂಸ್ಕೃತಿಕ ಭವನಗಳನ್ನು ನಿರ್ಮಿಸುವ ಉದ್ದೇಶ ಇರುವುದಿಲ್ಲ.

ಇ) ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಐ.ಐ.ಟಿ.ಗೆ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಬೇರೆ ಉದ್ದೇಶಗಳಿಗೆ ಬಳಸುವ ಬಗ್ಗೆ

164 : (267)

ಪ್ರಕಾಶ್ ಹೆಚ್.ಎಸ್. (ಹಾಸನ)

ಅ) ಹಾಸನ ನಗರದಲ್ಲಿ ಐ.ಐ.ಟಿ.ಗೆ ಸ್ವಾಧೀನಪಡಿಸಿಕೊಂಡಿರುವ 1057 ಎಕರೆ ರೈತರ ಜಮೀನನ್ನು ಯಾವ ರೈತರ ಜಮೀನನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ; (ವಿವರ ನೀಡುವುದು)

ಆ) ರೈತರಿಂದ ಐ.ಐ.ಟಿ.ಗೆ ವಶಪಡಿಸಿಕೊಂಡು ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಉಪಯೋಗಿಸಲು ಅವಕಾಶವಿದೆಯೇ; ಹಾಗಿದ್ದಲ್ಲಿ ಮಾಹಿತಿ ನೀಡುವುದು?

ಶ್ರೀ ಮುರುಗೇಶ್.ಆರ್.ನಿರಾಣಿ

(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಹಾಸನ ನಗರದಲ್ಲಿ ಐ.ಐ.ಟಿ ಯೋಜನೆ ಅನುಷ್ಠಾನಗೊಳ್ಳುವ ಕಾರಣ ಹಾಸನ ತಾಲ್ಲೂಕು, ಕಾಚನಾಯಕನಹಳ್ಳಿ ಮತ್ತು ಇತರೆ 7 ಗ್ರಾಮಗಳಲ್ಲಿ ಸ್ವಾಧೀನಪಡಿಸಿಕೊಂಡಿರುವ ಒಟ್ಟು 1057–24 ಎಕರೆ ಜಮೀನನ್ನು ಮಂಡಳಿ ವತಿಯಿಂದ ಕೈಗಾರಿಕಾ ಪ್ರದೇಶವನ್ನಾಗಿ ಅಭಿವೃದ್ಧಿ ಪಡಿಸಲು ದಿನಾಂಕ: 01.02.2008 ರಂದು ಜರುಗಿದ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿದೆ. ಈ ಜಮೀನಿಗೆ ಪರಿಹಾರ ಪಾವತಿ ಕಾರ್ಯ